ಮಳೆ ಬೀಳುತ್ತಿಲ್ಲ. ಸ್ವಲ್ಪ ಮಳೆ ಬಿದ್ದರೂ ಕೆಲವು ಜಲಮೂಲಗಳು ಘಟ್ಟ ಇಳಿಯುವ ದಾರಿಯಲ್ಲೇ ಕಳೆದುಹೋಗುತ್ತಿವೆ.

ಕಾಳಿ ನದಿ ಉತ್ತರ ಕನ್ನಡ ಮತ್ತು ಕಾರವಾರದಲ್ಲಿ 184 ಕಿ.ಮೀ. ಹರಿಯುತ್ತದೆ. ಆದರೆ ಅದು ಸಹಜವಾಗಿ ಹರಿಯುವುದು ಕೇವಲ 18 ಕಿ.ಮೀ. ಮಾತ್ರ. ಕಾಳಿ ನದಿ ಹುಟ್ಟಿ 10 ಕಿ.ಮೀ. ಕ್ರಮಿಸುವಲ್ಲಿ ಸೂಪಾ ಅಣೆಕಟ್ಟೆ ಕಟ್ಟಲಾಗಿದೆ. ನಂತರ ಒಂದರ ಮೇಲೊಂದರಂತೆ ಈ ನದಿಗೆ ಮತ್ತೆ ಆರು ಅಣೆಕಟ್ಟೆಗಳನ್ನು ಕಟ್ಟಲಾಗಿದೆ. ಆ ಕಟ್ಟೆಗಳು ತುಂಬಿ ತುಳುಕಿದರೆ ನದಿ ನೈಸರ್ಗಿಕವಾಗಿ 8 ಕಿ.ಮೀ. ಮಾತ್ರ ಹರಿದು ಅರಬ್ಬೀ ಸಮುದ್ರ ಸೇರುತ್ತದೆ. ಬೇಸಿಗೆಯ ಸಮಯದಲ್ಲಿ ಈ ನದಿ ಮುಖಜಭೂಮಿ ತಲುಪುವ ಮುಂಚೆಯೇ ಒಣಗಿ ಹೋಗುತ್ತದೆ.

ನೇತ್ರಾವತಿ ಕರ್ನಾಟಕದ ಅಮೆಜಾನ್ ನದಿ. ಕರಾವಳಿ ಜೀವನದಿ ಎನಿಸಿದ ಇದು ರಭಸಕ್ಕೆ ಹೆಸರುವಾಸಿ. 4,256.80 ಚ.ಕಿ.ಮೀ. ವ್ಯಾಪ್ತಿಯ ಜಲಾನಯನದಲ್ಲಿ ನೀರನ್ನು ಒಟ್ಟುಗೂಡಿಸಿ 148 ಕಿ.ಮೀ. ಹರಿಯುತ್ತದೆ. 1689 ಮೀಟರ್ ಎತ್ತರದ ಕುದುರೆಮುಖ ಪರ್ವತ ಶ್ರೇಣಿಯ ಎಳನೀರು ಘಾಟಿ ಎಂಬಲ್ಲಿ ಹುಟ್ಟಿ, ಸುಬ್ರಮಣ್ಯದ ಬಳಿ ಹರಿಯುವ ಕುಮಾರಧಾರ ಉಪನದಿ ಉಪ್ಪಿನಂಗಡಿ ಬಳಿ ನೇತ್ರಾವತಿಗೆ ಸೇರುತ್ತದೆ. ಪಶ್ಚಿಮಘಟ್ಟದಲ್ಲಿ ಹುಟ್ಟುವ ಎಂಟು ಉಪನದಿಗಳು ನೇತ್ರಾವತಿಗೆ ಸೇರುತ್ತವೆ. ಬಂಡಾಜೆ ಹೊಳೆ, ಮೃತ್ಯುಂಜಯ ಹೊಳೆ, ಅಣಿಯೂರು ಹೊಳೆ, ಸುನಾಲ ಹೊಳೆ, ಕೆಂಪು ಹೊಳೆ, ಕಪಿಲಾ ಹೊಳೆ ನೇತ್ರಾವತಿಯನ್ನು ಧರ್ಮಸ್ಥಳ ಸಮೀಪ ಸೇರಿ ನದಿ ಹಿಗ್ಗಿಸಿ ಹರಿಯುತ್ತವೆ. ಶಿರ್ಲಾಲು ಹೊಳೆ, ಶಿವನಾಳಹಳ್ಳ, ಹಳೆಮನೆ ಹಳ್ಳ, ಬಟ್ಟಿ ಹಳ್ಳ, ಕಿಲ್ಲೂರು ಹಳ್ಳ, ಬಂಗರಬಳಿಕ ಹಳ್ಳ, ಆನಡ್ಕ ಹಳ್ಳ, ನಂದಿಕಾಡು ಹಳ್ಳ, ಮಲ್ಲಹಳ್ಳ, ಎಳುವರೆ ಹಳ್ಳ, ಕೂಡು ಬೆಟ್ಟ ಹಳ್ಳ, ಮುಂಡಾಜೆ ಹಳ್ಳ, ಬಿರುಮನೆ ಹೊಳೆ, ನೆಲ್ಲಿತಾಟು ಹಳ್ಳ, ಕೇರಿ ಹೊಳೆ, ಹೊಂಗದ ಹೊಳೆ, ಮಾರುತಿ ಹೊಳೆ, ಅಂಗದ ಹೊಳೆ – ಈ ಜಲಮೂಲಗಳು ನೇತ್ರಾವತಿಯನ್ನು ಮತ್ತಷ್ಟು ಹಿಗ್ಗುವಂತೆ ಮಾಡುತ್ತವೆ. ಇಷ್ಟು ಜಲಮೂಲಗಳನ್ನು ಹೊತ್ತು ಹರಿಯುವ ನೇತ್ರಾವತಿ, ಬೇಸಿಗೆಯಲ್ಲಿ ಒಣಗಿಹೋಗುತ್ತದೆ.

ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆಗಳ ಬಯಲು ಸೀಮೆಯಲ್ಲಿ ಹರಿಯುವ ಜಯಮಂಗಲಿ, ಚಿತ್ರಾವತಿ, ಉತ್ತರ ಪಿನಾಕಿನಿ, ಹಗರಿಯಂತಹ ನದಿಗಳು ದೊಡ್ಡ ಮಳೆ ಬಂದಾಗಲೂ ಹರಿಯುವುದು ಅಪರೂಪ. ಈ ನದಿಗಳು ತಿಂಗಳಾನುಗಟ್ಟಲೆ ರಭಸವಾಗಿ ಮಳೆ ಸುರಿದರೆ ಮಾತ್ರ ಜೀವಗೊಳ್ಳುತ್ತವೆ. ಇಂತಹ ಕಳೆದುಹೋಗುವ ಹಲವಾರು ನದಿಗಳು ಕರ್ನಾಟಕದಲ್ಲಿವೆ.

## ಕಾವೇರಿಯನು ಕುಡಿಯಲು ಬಿಟ್ಟು...

ಕಾವೇರಿಯ ಇಡೀ ಪ್ರವರವನ್ನು ಸಂಶೋಧಕರು, ಪರಿಸರವಾದಿಗಳು ಜಾಲಾಡಿದ್ದಾರೆ. ಬೆಂಗಳೂರು ಸೇರಿದಂತೆ ಕೆಲವು ಪಟ್ಟಣ ಮತ್ತು ಗ್ರಾಮಗಳ ಬಾಯಾರಿಕೆ ತಣಿಸುವ ಕಾವೇರಿ ನದಿಯ ಜಲಸಂಪತ್ತನ್ನು ಉಪಯೋಗಿಸಿ ನದಿಯನ್ನು ಖಾಲಿ ಮಾಡುತ್ತಿದ್ದೇವೆ ಎಂದು ಯೋಚಿಸುವವರು ಬಹಳ ಜನ ಇಲ್ಲ.

‘ದಕ್ಷಿಣ ಗಂಗೆ’ ಎಂದು ಗುರುತಿಸುವ ಈ ನದಿ ಹುಟ್ಟುವುದು ಮಡಿಕೇರಿಯ ತಲಕಾವೇರಿಯಲ್ಲಿ. ಪ್ರಾರಂಭದಲ್ಲಿ ಬುಗ್ಗೆ, ಊಟೆ ಎಂದು ಕರೆಸಿಕೊಂಡು ಚಿಲುಮೆಯಾಗಿ ಪುಟ್ಟದಾಗಿ ಹರಿಯುವಾಗ ಈ ಅಸಲು ನದಿಗೆ ‘ಕನಕ’ ಎಂಬ ಗುಪ್ತಗಾಮಿನಿ ಒಡಗೂಡಿ ಹಿರಿದಾಗಿ ಭಾಗಮಂಡಲ ತಲುಪುತ್ತದೆ. ಅಲ್ಲಿ ‘ಸಜ್ಜೋತ’ ಎಂಬ ಗುಪ್ತಗಾಮಿನಿ ಸೇರಿ ಕಾವೇರಿ ಸ್ವಲ್ಪ ಹಿಗ್ಗುತ್ತದೆ. ನಂತರ, ಕುಕ್ಕಬ್ಬೆ, ಕಡಮೂರು ಮತ್ತು ಕುಮ್ಮಹೊಳೆ ಜೊತೆ ಸೇರಿ ಕೊಡಗು ಜಿಲ್ಲೆಯಲ್ಲೇ ಅಂದಾಜು 80 ಕಿ.ಮೀ. ಕ್ರಮಿಸುತ್ತದೆ. ಕೊಡಗು ಜಿಲ್ಲೆಯನ್ನು ಬಿಡುವ ಮುಂಚೆ ಹಾರಂಗಿ ಹೊಳೆಯನ್ನು ತನ್ನ ಒಡಲಲ್ಲಿ ಹಾಕಿಕೊಂಡು ಹೇಮಾವತಿ ಮತ್ತು ಲಕ್ಷ್ಮಣ ತೀರ್ಥ ಉಪನದಿಗಳ ಸಂಗಡ ಕೃಷ್ಣರಾಜ ಸಾಗರ ತಲುಪುತ್ತದೆ. ಶ್ರೀರಂಗಪಟ್ಟಣದ ಸಮೀಪ ಚಿಕೋಲ, ಲೋಕಪಾವನಿ ಸೇರುತ್ತದೆ. ತಿರುಮಲಕೂಡಲು ನರಸೀಪುರ ಬಳಿ ಕಬಿನಿ ನದಿಯನ್ನು ಸೇರಿಸಿಕೊಂಡು ಹರಿಯುವಾಗ ಮತ್ತೊಂದು ಗುಪ್ತಗಾಮಿನಿ ಸ್ಫಟಿಕ ಸೇರುತ್ತದೆ.

ಕಾವೇರಿ ಮುಂದೆ ಹರಿದಂತೆ ಬಹಳ ಗುಪ್ತಗಾಮಿನಿಗಳು ಸೇರುತ್ತವೆ. ಗುಪ್ತಗಾಮಿನಿಗಳು ಒಂದಾನೊಂದು ಕಾಲದಲ್ಲಿ ಹರಿಯುವ ನದಿಗಳಾಗಿದ್ದವು. ಇವೆಲ್ಲಾ ಕಳೆದುಹೋದ ನದಿಗಳ ಸಾಲಿನಲ್ಲಿ ಗುರುತಿಸಿಕೊಳ್ಳುತ್ತವೆ.

ಕರ್ನಾಟಕದ 15 ನದಿಗಳು ಕಲುಷಿತ ಪಟ್ಟಿಯಲ್ಲಿ ಸೇರಿವೆ. ಕಾವೇರಿ, ಕಬಿನಿ, ಲಕ್ಷ್ಮಣ ತೀರ್ಥ, ಶಿಂಷಾ, ಅರ್ಕಾವತಿ, ತುಂಗಾ, ಭದ್ರಾ, ಕೃಷ್ಣಾ, ಭೀಮಾ, ಘಟಪ್ರಭಾ, ಮಲಪ್ರಭಾ, ಕಾಳಿ, ಮಂಜಿರಾ ಮುಂತಾದ ನದಿಗಳ ಓಟ ಮಾಲಿನ್ಯದ ಸೇರ್ಪಡೆಯಿಂದ ಕುಂಠಿತವಾಗಿದೆ.

ಎಪ್ಪತ್ತರ ದಶಕದಲ್ಲಿ ಕಾವೇರಿ ಸೇತುವೆ ಮೇಲೆ ಬಸ್ಸಿನಲ್ಲಿ ಪ್ರಯಾಣಿಸುವಾಗ ನದಿ ತುಂಬಿ ರಭಸವಾಗಿ ಹರಿಯುತ್ತಿದ್ದ ಚಿತ್ರಣ ಕಾಣುತ್ತಿತ್ತು. ಆದರೆ ಎರಡು ದಶಕಗಳಿಂದ ಕಾವೇರಿ ಪಾತ್ರವೆಲ್ಲಾ ಬತ್ತಿ ಬರಡಾದಂತಿದೆ. ಬೇಸಿಗೆ ಬಂತೆಂದರೆ ಕಾವೇರಿ ಮರಳಿನ ಮೈದಾನ. ಅಲ್ಲಲ್ಲಿ ಸ್ವಲ್ಪ ನಿಂತ ನೀರು ಕುರಿ ಮೇಕೆ ಕುಡಿಯಲೂ ಸಾಕಾಗದು. ಹಲವಷ್ಟು ನದಿಗಳನ್ನು ಸೇರಿಸಿಕೊಂಡು ಹರಿಯುವ ಕಾವೇರಿ ಸಂಗಮ ಮತ್ತು ಮೇಕೆದಾಟು ಕಮರಿಯ ಇಕ್ಕಟ್ಟಿನಲ್ಲಿ ಬಡಕಲಾಗಿ ಹರಿಯುವುದನ್ನು ನೋಡಿದರೆ ಅದೆಷ್ಟು ಸೊರಗಿದೆ ಎಂದು ಅರ್ಥವಾಗುತ್ತದೆ.



ದಿಕ್ಕೆಟ್ಟಂತೆ ಕಾಣಿಸುತ್ತಿರುವ ಕಾವೇರಿ ಹರಿವು



ಬಿಸಿಲಬೇಗೆಗೆ ಸೊರಗುವ ಹೊಗೇನಕಲ್ ಜಲಪಾತ

ಚಿತ್ರ: ಡಿ. ಬಸವರಾಜು